**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ**359/2020**

ಸಿ.ಡಬ್ಲ್ಯೂ –15 ಪಿ.ಡಬ್ಲ್ಯೂ -10

| | | |
|---|---|---|
| ಹೆಸರು | ಃ | ವೆಂಕಮ್ಮ |
| ತಂದೆಃಗಂಡ | ಃ | ರಾಮಯ್ಯ |
| ವಯಸ್ಸು | ಃ | 70 ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸಸ್ಥಳ | ಃ | ಅಂಬಲಗಾ |

ದಿನಾಂಕಃ11.07.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿ ಪರಿಚಯ ಇರುವುದಿಲ್ಲ. ಚಾಸಾ-1 ರಿಂದ 12, ಪರಿಚಯ ಇರುತ್ತದೆ ಉಳಿದವರ ಪರಿಚಯ ಇರುವುದಿಲ್ಲ. ಮೃತ ಹೊಂದಿದವರ ಪರಿಚಯ ಇರುತ್ತದೆ. ನನಗೆ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ. ನನ್ನಹೆಸರು ಬರೆದುಕೊಂಡಿರುತ್ತಾರೆ. ನನಗೆ ಗಾಯಗಳು ಆಗಿರುತ್ತವೆ.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)**

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.10.02.2020 ರಂದು ಮದ್ಯಾಹ್ನ 3.45 ಗಂಟೆಗೆ ಅಂಬಲಗಾ ಕ್ರಾಸ ಕಮಾನಿನಿಂದ ಅಂಬಲಗಾ ಗ್ರಾಮಕ್ಕೆ ಹೋಗುವಾಗ ಅಪಘಾತ ಆಯಿತು ಎಂದರೆ ಸರಿ. ಆರೋಪಿ ಟಂಟಂ ಸಂಖ್ಯೆ ಕೆಎ-32/ಎ-1889 ಇತ್ತು ಎಂದರೆ ಸರಿ. ನಾನು ಚಾಸಾ-8 ರಿಂದ 14 ರವರು ಸದರಿ ಗಾಡಿಯಲ್ಲಿ ಇದ್ದೇವು ಎಂದರೆ ಸರಿ.ಆರೊಪಿ ವಾಹನವನ್ನು ವೇಗವಾಗಿ ಹಾಗೂ ನಿಶ್ಕಾಳಜಿತನದಿಂದ ವಾಹನ ಚಲಾಯಿಸಿ ವಾಹನ ಪಲ್ಟಿಯಾದ ಕಾರಣ ಅಪಘಾತ ಆಗಿರುತ್ತದೆ ಎಂದರೆ ಸರಿ. ರತ್ನಾಬಾಯಿ ಬಾಯಿ ಹಾಗು ದಾಮು ಮೃತ ಹೊಂದಿರುತ್ತಾರೆ ಎಂದರೆ ಸರಿ. ಆದಿತ್ಯರವರಿಗೆ ಗಾಯಗಳು ಆಗಿರುತ್ತವೆ ಎಂದರೆ ಸರಿ. ಚಾಸಾ-8 ರಿಂದ 12, 14 ರವರಿಗೆ ಗಾಯಗಳು ಅಗಿರುತ್ತವೆ ಎಂದರೆ ಸರಿ.ಅಪಘಾತ ಆರೋಪಿಯ ತಪ್ಪಿನಿಂದ ಆಗಿರುತ್ತದೆ ಎಂದರ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಪೋಲಿಸರ ಎದುರು ಈ ರೀತಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ. ಎ.ಸಿ.ಟಿ  ವಕೀಲರಿಂದ</u>**

ಅಂಬಲಗಾ ಕ್ರಾಸದಿಂದ ನಾನು ಅಂಬಲಗಾ ಕಡೆಗೆ ಹೋಗುತ್ತಿದ್ದೇನೆ. ಅಂಬಲಗಾ ಕ್ರಾಸ ಹತ್ತಿರ ಒಂದು ಕಮಾನ ಇದೆ ಎಂದರೆ ಸರಿ. ಅಂಬಲಗಾ ಹೊಗುವಾಗ ಇಳಿಜಾರು ಇದೆ ಎಂದರೆ ಸರಿ. ಘಟನೆ ನಡೆದ ಸಮಯದಲ್ಲಿ ರಸ್ತೆ ಸರಿ ಇರಲಿಲ್ಲ ಎಂದರೆ ಸರಿ. ಅಂಬಲಗಾ ಹೋಗುವ ರಸ್ತೆಯಲ್ಲಿ ತಿರುವು ಇದೆ ಎಂದರೆ ಸರಿ. ಆರೋಪಿಯ ತಪ್ಪಿನಿಂದಲ್ಲದೇ ತಿರುವು ಇದ್ದ ಕಾರಣ ಅಪಘಾತ ಅಗಿರುತ್ತದೆ ಎಂದರೆ ಸರಿ. ತಿರುವಿನ ಹತ್ತಿರ ಸಾಕಷ್ಟು ಅಪಘಾತಗಳು ಆಗುತ್ತವೆ ಎಂದರೆ ಸರಿ. ಈಗ ರಸ್ತೆ ಸರಿ ಮಾಡಿರುತ್ತಾರೆ ಎಂದರೆ ಸರಿ. ರಸ್ತೆ ಸರಿಯಾದ ನಂತರ ಅಪಘಾತಗಳು ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯನ್ನು ನಾನು ಈ ಮುಂಚೆ ನೋಡಿರುವುದಿಲ್ಲ. ಪರಿಹಾರ ಧನಕ್ಕಾಗಿ ಕಲಬುರಗಿ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತೇವೆ ಎಂದರ ಸರಿ. ಆರೋಪಿ ತಪ್ಪಿನಿಂದ ಅಲ್ಲದೇ ತಿರುವು ಇದ್ದ ಕಾರಣ ಅಪಘಾತ ಅಗಿರುತ್ತದೆ ಎಂದರೆ ಸರಿ. ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ಪರಿಹಾರ ಧನಕ್ಕಾಗಿ  ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇರುವುದಿಲ್ಲ.**

ಓ.ಹೇ.ಕೇ.ಸರಿ  ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.  ಆಳಂದ